ದೂರವಾಣಿ : 080-2976 2005, 2976 2006
ವೆಬ್‌ಸೈಟ್ : www.kanakapura.tpa.gov.in
E-mail : kkpaplan@gmail.com

# ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಸಂಖ್ಯೆ : ಕಯೋಪ್ರಾ/ಎಲ್‌ಎಓ/142/2022-23/2590 ದಿನಾಂಕ : 20 FEB 2023

## ಅನುಮೋದನಾ ಪತ್ರ
(ನಮೂನೆ-3)

ವಿಷಯ : **ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಿ ಗ್ರಾಮದ ಸ.ನಂ. 36 ರಲ್ಲಿ 0ಎ-36ಗುಂ, ಸ.ನಂ. 37/1 ರಲ್ಲಿ 1ಎ-07ಗುಂ ಮತ್ತು ಸ.ನಂ. 37/2 ರಲ್ಲಿ 1ಎ-37ಗುಂ ಒಟ್ಟು 4ಎ-00ಗುಂ ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶದ ಅಭಿವೃದ್ಧಿ ನಕ್ಷೆ ಅನುಮೋದನೆ ನೀಡುವ ಬಗ್ಗೆ.**

ಉಲ್ಲೇಖ : 1) ಅರ್ಜಿದಾರರ ಮನವಿ ಪತ್ರ ದಿನಾಂಕ : 06.10.2022.
2) ದಿನಾಂಕ : 05.01.2023 ರಂದು ನಡೆದ ಪ್ರಾಧಿಕಾರದ 84ನೇ ಸಭೆಯ ವಿಷಯ ಸಂಖ್ಯೆ: 21ರ ನಿರ್ಣಯ.
3) ಈ ಕಛೇರಿ ಪತ್ರ ಸಂಖ್ಯೆ:ಕಯೋಪ್ರಾ/ಎಲ್‌ಎಓ/142/2022-23 ದಿನಾಂಕ:09.01.2023.
4) ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಬಗ್ಗೆ ರಸೀದಿ ನಂ. 1115 ದಿನಾಂಕ : 23.01.2023
5) ಪರಿತ್ಯಾಜನಾ ಪತ್ರ ನೋಂದಾಯಿಸಿದ ದಿನಾಂಕ : 13.02.2023.

******

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಮನವಿ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಉತ್ತರಿ ಗ್ರಾಮದ ಸ.ನಂ. 36 ರಲ್ಲಿ 0ಎ-36ಗುಂ, ಸ.ನಂ. 37/1 ರಲ್ಲಿ 1ಎ-07ಗುಂ ಮತ್ತು ಸ.ನಂ. 37/2 ರಲ್ಲಿ 1ಎ-37ಗುಂ ಒಟ್ಟು 4ಎ-00ಗುಂ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶದ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲು ಅರ್ಜಿದಾರರು ಕೋರಲಾಗಿದ್ದು, ವಿಷಯವನ್ನು ಉಲ್ಲೇಖ (2)ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಉಲ್ಲೇಖ (3) ರಲ್ಲಿ ಶುಲ್ಕ ಪಾವತಿಗೆ ಅರ್ಜಿದಾರರಿಗೆ ತಿಳುವಳಿಕೆ ಪತ್ರ ನೀಡಲಾಗಿತ್ತು. ಅದರಂತೆ ಉಲ್ಲೇಖ (4) ರಲ್ಲಿ ಶುಲ್ಕ ಪಾವತಿಸಿರುತ್ತಾರೆ. ಅಭಿವೃದ್ಧಿ ನಕ್ಷೆಯಲ್ಲಿ ಮೀಸಲಿಟ್ಟಿರುವ ಉದ್ಯಾನವನ, ಪಿ.ಆರ್.ಆರ್. ರಸ್ತೆ ಮತ್ತು ನಾಗರೀಕ ಸೌಲಭ್ಯ ಜಾಗಗಳನ್ನು ಉಲ್ಲೇಖ (5) ರಲ್ಲಿ ಅರ್ಜಿದಾರರು ಪರಿತ್ಯಾಜನಾ ಪತ್ರದ ಮುಖಾಂತರ ನೋಂದಣಿ ಮಾಡಿಸಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಂತೆ ಸದರಿ ಜಮೀನುಗಳನ್ನು ವಸತಿ ವಲಯಕ್ಕಾಗಿ ಕಾಯ್ದಿರಿಸಲಾಗಿದೆ ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17(2) ರನ್ವಯ **ಮೆ॥ ಜಿ.ಆರ್.ಸಿ. ಇನ್ಫ್ರಾದ ಪಾಲುದಾರರಾದ ಶ್ರೀಮತಿ ಜಿ. ಲಕ್ಷ್ಮೀ** ಇವರಿಗೆ **ಈ ಕೆಳಗಿನ ಷರತ್ತುಗಳಿಗೊಳಪಟ್ಟು ವಸತಿ ಉದ್ದೇಶದ ಅಭಿವೃದ್ಧಿ ನಕ್ಷೆಗೆ** ಮಾತ್ರ ಅನುಮೋದನೆ ನೀಡಲಾಗಿದೆ.

### :: ಷರತ್ತುಗಳು ::

1. ಈಗ ನೀಡಿರುವ **ವಸತಿ ಉದ್ದೇಶದ ಅಭಿವೃದ್ಧಿ ನಕ್ಷೆಯ** ಮಂಜೂರಾತಿ ಅವಧಿಯು ಮಂಜೂರಾತಿ ನೀಡಿದ 02 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಒಂದು ವೇಳೆ ಕಾಮಗಾರಿಗಳು ಮುಕ್ತಾಯಗೊಳ್ಳದಿದ್ದಲ್ಲಿ ನಕ್ಷೆ ನವೀಕರಿಸಿಕೊಳ್ಳತಕ್ಕದ್ದು.

2. ಅಭಿವೃದ್ಧಿ ನಕ್ಷೆಯಲ್ಲಿನ ಪ್ರದೇಶವನ್ನು ಅಂದರೆ ರಸ್ತೆ (ಡಾಂಬರೀಕರಣ) ಒಳಚರಂಡಿ, ತೆರೆದ ಚರಂಡಿ, ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ವ್ಯವಸ್ಥೆ, ಎಸ್.ಟಿ.ಪಿ., ಉದ್ಯಾನವನ/ಬಫರ್ ಮುಂತಾದ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದೊಂದಿಗೆ ಅಭಿವೃದ್ಧಿಪಡಿಸತಕ್ಕದ್ದು.

....2

3. ಕಟ್ಟಡ ನಕ್ಷೆಗಳಿಗೆ ಅನುಮೋದನೆ ಪಡೆಯುವ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಅಗ್ನಿಶಾಮಕ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸದರಿ ಪತ್ರದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

4. ಸರ್ಕಾರವು ನಿಗಧಿಪಡಿಸುವ ಇತರೆ ಯಾವುದೇ ಶುಲ್ಕಗಳನ್ನು ಸಂಸ್ಥೆಯವರೇ ಪಾಲಿಸತಕ್ಕದ್ದು.

5. ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ರವರ ಭೂ ಪರಿವರ್ತನೆಯ ಆದೇಶದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

6. ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಅಭಿವೃದ್ಧಿ ನಕ್ಷೆಯಲ್ಲಿ ಮಳೆ ನೀರು ಪೋಲಾಗುವುದನ್ನು ತಡೆದು ಅಂತರ್‌ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

7. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಅಭಿವೃದ್ಧಿ ನಕ್ಷೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.

8. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಹಾಗೂ ಜಮೀನಿನ ಸುತ್ತಲು ಗಿಡ-ಮರಗಳನ್ನು ಬೆಳೆಸಿ (Buffer zone) ಸದರಿ ಯೋಜನೆಯಿಂದ ಪರಿಸರ ಮತ್ತು ವಸತಿ ಬಡಾವಣೆಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮವಹಿಸತಕ್ಕದ್ದು.

9. ಅಭಿವೃದ್ಧಿ ನಕ್ಷೆಯಲ್ಲಿ ಹಾದುಹೋಗಿರುವ ಸಾರ್ವಜನಿಕ ರಸ್ತೆಗಳನ್ನು ಯಾವುದೇ ಕಾರಣಕ್ಕೂ ನಿರ್ಭಂದಿಸತಕ್ಕದ್ದಲ್ಲ.

10. ಸದರಿ ಅಭಿವೃದ್ಧಿ ನಕ್ಷೆಯ ಪ್ರದೇಶಕ್ಕೆ ಸಂಪೂರ್ಣವಾಗಿ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸುವುದು.

11. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot path) ನಿರ್ಮಿಸುವುದು.

12. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

13. ಜಮೀನಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಹೊಣೆಯಾಗುವುದಿಲ್ಲ.

14. ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ಆಗುವ ಅನಾನುಕೂಲಗಳ ಬಗ್ಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ. ಅಭಿವೃದ್ಧಿದಾರರೇ ಸಂಪೂರ್ಣ ಜವಾಬ್ದಾರಿಯಾಗಿರತಕ್ಕದ್ದು.

15. ಅಭಿವೃದ್ಧಿ ನಕ್ಷೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ಯಾವುದೇ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇ ತಾನಾಗಿ ರದ್ದುಗೊಳ್ಳುತ್ತದೆ.

.....3

ದೂರವಾಣಿ : 080-2976 2005, 2976 2006
ವೆಬ್‌ಸೈಟ್ : www.kanakapura.tpa.gov.in
E-mail : kkpaplan@gmail.com

# ಕನಕಪುರ ಯೋಜನಾ ಪ್ರಾಧಿಕಾರ

ಖಾತಾ ನಂ. 469/CA, ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ, ಕನಕಪುರ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

16. ಕೊಳವೆ ಬಾವಿಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ:36:2009ರಲ್ಲಿ ದಿನಾಂಕ:06.08.2010ರಂದು ನೀಡಿರುವ ತೀರ್ಪನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ಬಗ್ಗೆ ಸಂಬಂಧಪಟ್ಟ ಪುರಸಭೆ/ಗ್ರಾಮ ಪಂಚಾಯಿತಿಗಳು ನಿಯಮಾವಳಿಗಳನ್ವಯ ಅಗತ್ಯ ಕ್ರಮ ಜರುಗಿಸತಕ್ಕದ್ದು.

17. ಸದರಿ ನಿವೇಶನದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಪ್ರಾರಂಭ ಮಾಡುವ ಮುಂಚೆ ಪ್ರಾಧಿಕಾರದಿಂದ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯತಕ್ಕದ್ದು.

18. ಸದರಿ ಜಮೀನಿನಲ್ಲಿ ಬರುವ 'ಬಿ' ಖರಾಬು ಜಾಗವು ಸರ್ಕಾರಕ್ಕೆ ಸೇರಿದ್ದು, ವಿನ್ಯಾಸ ನಕ್ಷೆಯಂತೆ ಯಥಾವತ್ತಾಗಿ ಸ್ಥಳದಲ್ಲಿ ಉಳಿಸುವುದು ಹಾಗೂ ಪರಿಸರದಲ್ಲಿ ಹಳ್ಳ/ನಾಲಾ ಇವುಗಳನ್ನು ಯಥಾವತ್ತಾಗಿ ಸಂರಕ್ಷಿಸತಕ್ಕದ್ದು.

19. ಅಭಿವೃದ್ಧಿ ನಕ್ಷೆ ಕಾರ್ಯಗತಗೊಳಿಸುವ ಮೊದಲು ಸ್ಥಳೀಯ ಸಂಸ್ಥೆಯ ಕಾನೂನು ಅಡಿಯಲ್ಲಿ ಅನುಮತಿ ಪಡೆಯತಕ್ಕದ್ದು.

20. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಇಲಾಖೆಗಳು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 17(4) ರಂತೆ ಕ್ರಮಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

M.R.N. 20/2/2023
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ
ಹಾಗೂ ಸದಸ್ಯ-ಕಾರ್ಯದರ್ಶಿಗಳು,
ಕನಕಪುರ ಯೋಜನಾ ಪ್ರಾಧಿಕಾರ,
ಕನಕಪುರ.

**ಇವರಿಗೆ,**

ಶ್ರೀಮತಿ ಜಿ. ಲಕ್ಷ್ಮೀ
ಶ್ರೀ ರಾಜೇಂದ್ರನಾಯ್ಡು ರವರ ಪರವಾಗಿ ಜಿ.ಪಿ.ಎ.ದಾರರು
ಮೆ॥ ಜಿ.ಆರ್.ಸಿ. ಇನ್ಫ್ರಾ
ನಂ. 161/ಎ, 7ನೇ ಕ್ರಾಸ್, ಟೀಚರ್ಸ್ ಕಾಲೋನಿ,
ಕುಮಾರಸ್ವಾಮಿ ಲೇಔಟ್, ಬೆಂಗಳೂರು-560078

Housiey.com

Housiey.com